


# ಕಾಲಕ್ಕೆ ತಕ್ಕ ಬದಲಾವಣೆ

■ ಶಶಿರೇಖಾ ನಾಗೇಂದ್ರ

ಕಲೆ: ಸಂತೋಷ್ ಸಸಿಹಿತ್ಲು

ಸಹ್ಯಾದ್ರಿ ಬೆಟ್ಟದ ಕಾಡಿನಲ್ಲಿದ್ದ ಪ್ರಾಣಿ ಪಕ್ಷಿಗಳು ಬಹುಚಿಂತಾಕ್ರಾಂತವಾಗಿದ್ದವು. ವಯಸ್ಸಾಗಿದ್ದ ನರಿ, ತೋಳ, ಮೊಲ, ಗಿಳಿ, ಕಾಗೆ, ಗುಬ್ಬಿಗಳು ತಮ್ಮ ತಮ್ಮ ಅನುಭವವನ್ನು ಹೇಳಿಕೊಳ್ಳುತ್ತಿದ್ದವು. ಈಗ ಕಾಲ ಬದಲಾಗಿದೆ. ಮಾನವ ತನ್ನ ಸ್ವಾರ್ಥಕ್ಕಾಗಿ ಕಾಡನ್ನು ಕಡಿದು ನಾಡನ್ನಾಗಿ ಮಾಡಿದ್ದಾನೆ. ರಸ್ತೆ ಬದಿಯ ಮರಗಳನ್ನೂ ಕಡಿದು ಹಾಕುತ್ತಿದ್ದಾನೆ ಪಕ್ಷಿಗಳಾದ ನಾವು ಎಲ್ಲಿ ವಾಸಮಾಡುವುದು ಎಂದು ದುಃಖಿಸಿದವು. ತರುಣ ಪ್ರಾಣಿ–ಪಕ್ಷಿಗಳು ಕಾಲ ಬದಲಾದಂತೆ ಎಲ್ಲವು ಬದಲಾಗುತ್ತದೆ ನಮಗೂ ಬದುಕಲು ಏನಾದರೂ ದಾರಿ ಕಾಣುತ್ತದೆ ಯೋಚಿಸಬೇಡಿ ಎಂದು ಸಮಾಧಾನ ಮಾಡಿದವು.

ಯುವನರಿಯೊಂದು ತನ್ನ ಬಳಗವನ್ನು ಹುಡುಕಿಕೊಂಡು ಬರುತ್ತಿರುವಾಗ ಎದುರಿಗೆ ದ್ರಾಕ್ಷಿ ತೋಟ ಕಂಡಿತು. ನಮ್ಮ ಮುತ್ತಾತ ಈ ತೋಟದ ದ್ರಾಕ್ಷಿ ಹುಳಿ ಎಂದು ಹೇಳಿದ ನೆನಪು. ಈಗ ಹೇಗಿದೆ ನೋಡಣ ಎಂದು ತೋಟದೊಳಗೆ ಬಂದು ಕೆಳಗೆ ಬಿದ್ದಿದ್ದ ದ್ರಾಕ್ಷಿಹಣ್ಣನ್ನು ತಿಂದಿತು. ತುಂಬಾ ಸಿಹಿಯಾಗಿತ್ತು. ಈ ತೋಟದ ದ್ರಾಕ್ಷಿ ಸಿಹಿಯಾಗಿದೆ. ಆದರೂ ಮುತ್ತಾತ ಹುಳಿ ಎಂದು ಯಾಕೆ ಹೇಳಿದರು ಯೋಚಿಸುತ್ತಾ ದ್ರಾಕ್ಷಿ ಕೀಳಲು ಪ್ರಯತ್ನಿಸಿತು. ದ್ರಾಕ್ಷಿ ಗೊಂಚಲು ತುಂಬಾ ಎತ್ತರದಲ್ಲಿತ್ತು ನರಿಯ ಬಾಯಿಗೆ ಸಿಗುವಂತಿರಲಿಲ್ಲ. ಓ ಇದಾ ವಿಷಯ, ತಾತನಿಗೆ ಹಣ್ಣು ಕೀಳಲಾಗಿಲ್ಲ ಅದಕ್ಕೆ ಹುಳಿ ಎಂದಿದೆ ಬುದ್ಧಿವಂತ ತಾತ. ಈ ವಿಷಯ ಹಾಗೆ ಇರಲಿ ಈ ಹಣ್ಣು ಸಿಹಿಯಾಗಿದೆ ಎಂದು ಯಾರಿಗೂ ಹೇಳುವುದು ಬೇಡ ನಮ್ಮ ಕುಲದವರಿಗೆ ಮಾತ್ರ ತಿಳಿಸೋಣ ಎಂದುಕೊಂಡು ಸುತ್ತ ಹುಡುಕಿತು. ಅಲ್ಲೊಂದು ಕೊಕ್ಕೆಯ ಕಟ್ಟಿಗೆ ಇತ್ತು. ಆ ಕೊಕ್ಕೆಯನ್ನು ತಂದು ಚೆನ್ನಾಗಿ ಮಾಗಿದ್ದ ದ್ರಾಕ್ಷಿಯನ್ನು ಕಿತ್ತುಕೊಂಡು ತಿಂದು ಕೊಕ್ಕೆಯನ್ನು ಅಲ್ಲೆ ಇಟ್ಟು ಹೊರಟಿತು. ದ್ರಾಕ್ಷಿ ತೋಟದಲ್ಲಿ ದೊಡ್ಡ ಹೆಬ್ಬಾವಿದೆ ಯಾರು ಅತ್ತ ಹೋಗಬೇಡಿ ಎಂಬ ವಿಷಯ ಎಲ್ಲೆಡೆ ಹರಡಿತು. ಮಾನವ ನಾನೊಬ್ಬನೆ ತುಂಬ ಬುದ್ಧಿವಂತ ಎಂದುಕೊಂಡಿದ್ದಾನೆ. ಅವರು ಬುದ್ಧಿವಂತರಾದ ಹಾಗೆ ನಾವು ಸಹ ಬುದ್ಧಿವಂತರಾಗಿದ್ದೇವೆ ಎಂಬುದನ್ನು ಮರೆತಿದ್ದಾರೆ ಆ ಮೂರ್ಖರು.

ಊರ ಹೊರಗೆ ಪ್ರಾಣಿಯೊಂದು ಸತ್ತು ಬಿದ್ದಿತ್ತು. ಕಾಗೆಗಳೆಲ್ಲಾ ಕಾ ಕಾ ಎಂದು ಕೂಗುತ್ತ ಅದರ ಸುತ್ತ ಹಾರಾಡುತ್ತಿದ್ದವು. ಕಾಗೆಗಳಿಗೆ ಸತ್ತ ಪ್ರಾಣಿಯನ್ನು ತಿಂದ ಮೇಲೆ ಬಾಯಾರಿಕೆ ಆಯಿತು. ಮೊದಲಿನಂತೆ ನೀರು ಎಲ್ಲೆಂದರಲ್ಲಿ ಸಿಗುತ್ತಿಲ್ಲ. ಕೆರೆ, ಕಟ್ಟೆಗಳು ಮಾಯವಾಗಿ ಮಿನರಲ್ ವಾಟರ್ ಬಂದಿದೆ. ನೀರು ಕುಡಿಯಲು ಎಲ್ಲಿ ಸಿಗುತ್ತದೆ ಎಂದು ಹುಡುಕತೊಡಗಿದವು. ನೀರಿನ ವಿಷಯ ಬಂದಾಗಲೆಲ್ಲಾ ನಮ್ಮ ಮುತ್ತಾತ ಮಡಿಕೆಯ ತಳದಲ್ಲಿದ್ದ ನೀರನ್ನು ಕುಡಿಯಲು ಮಡಿಕೆಗೆ ಕಲ್ಲು ಹಾಕಿದ್ದನ್ನು ಎಲ್ಲರೂ ಮಾತಾಡುತ್ತಾರೆ. ನಮಗೀಗ ನೀರು ಬೇಕು ಎಂದು ಕೆಲ ನಿಮಿಷ ಯೋಚನೆ ಮಾಡಿ ಎಳನೀರು ಮಾರುತ್ತಿದ್ದವನ ಬಳಿ ಬಂದು ಸ್ಟ್ರಾ ತೆಗೆದುಕೊಂಡು ಮಿನರಲ್ ವಾಟರಿನ ಕ್ಯಾನಿನ ನಲ್ಲಿಯನ್ನು ಕೊಕ್ಕಿನಲ್ಲಿ ತಿರುಗಿಸಿ ಸ್ಟ್ರಾ ಇಟ್ಟು ಅದರಲ್ಲಿ ನೀರು ಕುಡಿಯಿತು. ಅಂಗಡಿಯಾತ ಕಾಗೆ ಕುಡಿದು ಬಿಟ್ಟ ನೀರು ಎಂದು ನೀರಿನ ಕ್ಯಾನನ್ನು ಆಚೆಯಿಟ್ಟನು. ಉಳಿದ ಕಾಗೆಗಳು ಬಂದು ಆ ನೀರನ್ನು ಕುಡಿದು ಕಾಲಕ್ಕೆ ತಕ್ಕಂತೆ ನಾವು ಬದಲಾಗಿದ್ದೇವೆ ಎಂದು ಹಾರಿಹೋದವು.

ನೀರಿನಲ್ಲಿ ಆಹಾರ ಹುಡುಕುತ್ತಿದ್ದ ಮೊಸಳೆಯ ಕಣ್ಣಿಗೆ ಮರದಿಂದ ಮರಕ್ಕೆ ನೆಗೆಯುತ್ತ ಹಣ್ಣು ತಿನ್ನುತಿದ್ದ ಕೋತಿ ಕಂಡಿತು. ಕೋತಿ ದಷ್ಟಪುಷ್ಟ ವಾಗಿತ್ತು. ಮೊಸಳೆಯ ಬಾಯಲ್ಲಿ ನೀರೂರಿತು. ಹೇಗಾದರೂ ಮಾಡಿ ಈ ಕೋತಿಯನ್ನು ತಿನ್ನಬೇಕು ಎಂದುಕೊಂಡಿತು. ನಮ್ಮ ತಾತ ಮಾಡಿದ ಪೆದ್ದು ಕೆಲಸದಿಂದ ನಮ್ಮನ್ನು ನೋಡಿದಾಗಲ್ಲೆಲ್ಲ ಮೊಸಳೆಯ ಕುಲವನ್ನೇ ಪೆದ್ದು ಬುದ್ದು ಎಂದು ಆಡಿಕೊಂಡು ನಗುತ್ತಿವೆ. ಅದಕ್ಕೆ ಈ ಸಲ ಏನಾದರೂ ಹೊಸ ಉಪಾಯ ಮಾಡಿ, ಈ ಕೋತಿಯನ್ನು ತಿಂದು ತಲೆಮಾರಿನಿಂದ ಬಂದಿರುವ ಕಳಂಕವನ್ನು ತೊಡೆದು ಹಾಕಬೇಕು ಎಂದುಕೊಂಡಿತು. ಎರಡು ದಿನಗಳ ನಂತರ ಮೊಸಳೆ ದಡಕ್ಕೆ ಬಂದು ಕೋತಿಯಣ್ಣ ಮರದಿಂದ ಮರಕ್ಕೆ ಹಾರಿ ಹಣ್ಣು ಹುಡುಕುತ್ತಿರುವೆಯಾ? ಇಲ್ಲೇನೂ ಅಷ್ಟೊಂದು ಹಣ್ಣುಗಳಿಲ್ಲ ಬಿಡು, ಹೊಳೆಯ ಆಚೆ ಬದಿ ತುಂಬಾ ಹಣ್ಣುಗಳಿವೆ. ಅಲ್ಲಿಗೂ ಒಂದು ಬಾರಿ ಹೋಗಿ ನೋಡಿಕೊಂಡು ಬಾ ಎಂದಿತು. ಕೋತಿ ನೋಡಿಕೊಂಡು ಬರುವುದರಲ್ಲಿ ತಪ್ಪಿಲ್ಲ ಸಂಜೆ ಹೋಗಿ ಬರುವೆ ಎಂದು ಮನದಲ್ಲೆ ತಿರ್ಮಾನಿಸಿತು. ಅದರಂತೆ ಕೋತಿ ನದಿಯ ಆಚೆ ಬದಿಗೆ ಹೋಗಿ ನೋಡಿದರೆ ಬರಿ ಗುಡ್ಡಗಾಡು ಪ್ರದೇಶ ಹಣ್ಣಿನ ಮರಗಳಿರಲಿಲ್ಲ. ಕೋತಿಗೆ ಮೊಸಳೆಯ ಸಂಚು ತಿಳಿಯಿತು. ಮರುದಿನ ಸಂಜೆ ನಿನ್ನ ಜೊತೆ ಆಚೆ ದಡಕ್ಕೆ ಬರುತ್ತೇನೆ ಈಗ ನನ್ನ ಜೊತೆ ಬಾ ಅಲ್ಲೊಂದು ಕಡೆ ದಪ್ಪದಪ್ಪ ಮೀನುಗಳಿವೆ ಎಂದಿತು.

ಮೀನು ಎಂದಾಗ ಮೊಸಳೆಯ ಬಾಯಲ್ಲಿ ನೀರೂರಿತು. ನಡೆ ಹೋಗಣ ಎಂದು ಹೊರಟಿತು. ಮಂಗ ಮರದಿಂದ ಮರಕ್ಕೆ ನೆಗೆಯುತ್ತಾ ಸಂದಿಗೊಂದುಗಳಲ್ಲಿ ಕರೆದುಕೊಂಡು ಬಂದಿತು. ನದಿಯಲ್ಲಿದ್ದ ಸುಳಿಯನ್ನು ನೋಡಿ ಮೊಸಳೆ ನಿನ್ನ ಮೋಸ ನನ್ನ ಹತ್ರ ನಡಿಯಲ್ಲ ಮಂಗಣ್ಣ ಎಂದು ಸುಳಿಗೆ ಎದುರಾಗಿ ನೀರಿನಲ್ಲಿ ಅಡಗಿಕೊಂಡು ಕಾಲಕ್ಕೆ ತಕ್ಕಂತೆ ನಾವು ಬದಲಾಗಿದ್ದೇವೆ ಎಂದುಕೊಂಡಿತು. ■

